ಕಥೆ

# ಸರಿ ಹೋದವರು



**ಶಶಿ ತರೀಕೆರೆ**

ಕಲೆ: ವೆಂಕಟ್ರಮಣ ಭಟ್

ಬೆಳಗ್ಗೆ ಐದು ಗಂಟೆಗೆ ಎದ್ದು ಸೀದಾ ಬಾಲ್ಕನಿಯ ಹೂವಿನ ಪಾಟುಗಳಿಗೆ ನೀರೆರೆದು ಒಂದ್ಹತ್ತು ನಿಮಿಷ ಅಲ್ಲೆ ಕುಕ್ಕರುಗಾಲಿನಲ್ಲಿ ಕುಂತು ಮೇಲೇಳುತ್ತಾಳೆ. ಬಾಲ್ಕನಿಯಲ್ಲಿ ಹೂವಿನ ಪಾಟುಗಳು ಕೆಲವು ವರ್ಷಗಳ ಹಿಂದೆ ಬಂದಂಥವು. ಆದರೆ, ಮುಂಚೆ ಅಲ್ಲೊಂದು ಪಾಪಸ್ ಕಳ್ಳಿ ಗಿಡವೊಂದಿತ್ತು. ಮಗ ತನ್ನ ತೊರೆದು ಹೋದಾಗ ಅವನ ನೆನಪಿಗೆಂದು ತಂದು ಬೆಳೆಸಿದ್ದಳು. ಪಾಪಸ್ ಕಳ್ಳಿಯಲ್ಲಿ ಯಾವಾಗ ಹೂವು ಬಿಟ್ಟಿತೋ ಇವಳಿಗೆ ಏನನ್ನಿಸಿತೋ ಬಾಲ್ಕನಿಯಿಂದ ಮನೆಯ ಮುಂದೆ ಕುಣಿತೋಡಿ ಅಲ್ಲಿ ನೆಟ್ಟಳು. ಅದೀಗ ವಿಶಾಲವಾಗಿ ಹಬ್ಬಿದೆ. ಅದರ ಪ್ರತಿ ಚಿಗುರನ್ನು ಮಗನ ಬೆಳವಣಿಗೆಯೆಂದೇ ಭಾವಿಸಿ ಹರ್ಷಗೊಳ್ಳುತ್ತಾಳೆ. ಕೆಳಗೆ ಬಿದ್ದ ಒಂದು ಹೂವನ್ನು ಆರಿಸಿಕೊಂಡು ಬಂದು ಗಂಡನ ಫೋಟೊ ಫ್ರೇಮಿಗೆ ಇಡುತ್ತಾಳೆ.

ಸರಿಯಾಗಿ ಐದು ಗಂಟೆ ಹದಿನೈದು ನಿಮಿಷಕ್ಕೆ ಇವಳ ಸ್ನಾನ. ಉಳಿದ ಐದು ನಿಮಿಷ ಸೋಫಾದ ಮೇಲೆ ಕೂರುತ್ತಾಳೆ. ಹಾಗೆ ಕೂತು ಗಂಡನ ಫೋಟೊ ದಿಟ್ಟಿಸುತ್ತಾಳೆ. ಏನೂ ಬದಲಾಗಿಲ್ಲ. ಅದೇ ನಗು, ಬಿಗಿಯಾದ ಕಪ್ಪು ಸೂಟಿನಲ್ಲಿ ಸುತ್ತಿದ ಮೌನ. ಇವಳ ನಿಟ್ಟುಸಿರು ಸ್ವಲ್ಪ ಬದಲಾಗಿದೆ.

ಅಡಿಗೆ ಮನೆಯಲ್ಲಿ ಎರಡು ಲೀಟರಿನಷ್ಟು ಉಕ್ಕುತ್ತಿರುವ ಚಹಾ ಪುಡಿ ಮಿಶ್ರಿತ ಹಾಲು. ಹೆಚ್ಚು ಸಕ್ಕರೆ ಬೆರೆಸಿಲ್ಲ ತಾನೇ ಎಂದು ತನ್ನನ್ನೇ ತಾನು ಪ್ರಶ್ನಿಸಿಕೊಳ್ಳುತ್ತಾಳೆ. ಯಾವುದಕ್ಕೂ ಇರಲಿ ಎಂದು ಒಮ್ಮೆ ಒಂದೆರಡು ಹನಿಗಳನ್ನು ನಾಲಿಗೆಗೆ ಸವರಿ ರುಚಿ ನೋಡುತ್ತಾಳೆ. ಹದವಾಗಿ ಕಾದ ಚಹಾ ನೊರೆಯ ಸಮೇತ ದೊಡ್ಡ ಥರ್ಮಾ ಫ್ಲಾಸ್ಕಿಗೆ ರವಾನೆಯಾಗುತ್ತದೆ. ಅದೂ ಯಾವುದೇ ಹನಿಗಳು ಕೆಳಗೆ ಬೀಳದೇ. ವಯಸ್ಸು ಅರವತ್ತಾದರೂ ಇವಳ ಕೈಗಳು ಕಂಪಿಸುವುದಿಲ್ಲವೆಂದು ಗ್ಯಾಸಿನ ಒಲೆಗಳಿಗೆ ಆಶ್ಚರ್ಯವಾಗುತ್ತದೆ. ಸೋಸಿದ ಚಹಾದ ಕಪ್ಪು ಚರಟ ಬಾಲ್ಕನಿಯ ಗಿಡಗಳಗೆ ನೈವೇದ್ಯವಾಗುತ್ತದೆ. ನಂತರ ಸುಡುತ್ತಿರುವ ಥರ್ಮಾ ಪ್ಲಾಸ್ಕು ದೊಡ್ಡದೊಂದು ಇವಳೇ ಹೆಣೆದ ನೈಲಾನ್ ವೈರಿನ ಬುಟ್ಟಿಗೆ ಸೇರಿಕೊಳ್ಳುತ್ತದೆ. ಆ ಬುಟ್ಟಿಯ ಹೊರ ಮೈಯಲ್ಲೊಂದು ತೂಗು ದೀಪದ ಚಿತ್ರವಿದೆ. ಹದಿನಾಲ್ಕು ಉದ್ದದ ಏಳು ಅಗಲದ ಚುಕ್ಕೆಯ ಚಿತ್ರ. ಖಾಲಿ ಚೀಲವೊಂದನ್ನು ಎಮರ್ಜೆನ್ಸಿಗೆ ಬುಟ್ಟಿಯಲ್ಲಿ ಇಟ್ಟುಕೊಂಡಿದ್ದಾಳೆ.

ಏಳು ಗಂಟೆಯ ಬಸ್ಸು ಇವಳಿಗಾಗಿ ಕಾದಿರುವಂತೆ ಅನ್ನಿಸುತ್ತದೆ. ಲೇಸಿಲ್ಲದ, ಫ್ರೀ ಎನಿಸುವ ಪಿಂಕ್ ಬಣ್ಣದ ಶೂ ಹಾಕಿ ಬಸ್ಸು ಹತ್ತಿಕೊಂಡು ಶಹರದ ಮಧ್ಯ ಭಾಗದಲ್ಲಿರುವ ಬೇಕರಿಗೆ ಇವಳ ಆಗಮನ. ಆಗಷ್ಟೇ ಶಟರ್ ಮೇಲೆತ್ತಿರುವ ಹುಡುಗರನ್ನು ಕಂಡು 'ಹಾಯ್', ಗುಡ್ ಮಾರ್ನಿಂಗ್' ಎಂದು ಅವರ ಜೊತೆಗೆ ಕೈ ಮಿಲಾಯಿಸುತ್ತಾಳೆ. ಗರ್ ಎಂದು